ಸಿ.ಸಿ. ನಂಬರಃ 637/2022
ಪಿ.ಡಬ್ಲ್ಯೂಃ 5

ದಿಃ 08-12-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 2ನೇ ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

7. ಅಕ್ಕಿಯ ತೂಕವನ್ನು ಮಾಡಿರುತ್ತೇನೆ ಎಂದು ಹೇಳುವ ಸಂದರ್ಭದಲ್ಲಿ ತೂಕವನ್ನು ನಮೂದು ಮಾಡಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಗೊಡೌನಿನಲ್ಲಿ ಅಕ್ಕಿಯನ್ನು ಇಳಿಸಬೇಕಾದರೆ ಪಂಚನಾಮೆಯನ್ನು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ತೂಕವನ್ನು ಬರೆದುಕೊಂಡಿರುತ್ತೇನೆ ಎಂದು ಹೇಳುವ ದಾಖಲೆ ಇದೆಯಾ ಎಂದರೆ ಇರುತ್ತದೆ ಎಂದು ನುಡಿಯುತ್ತಾರೆ. ಅದನ್ನು ಪೊಲೀಸರಿಗೆ ಕೊಡಲು ಏನಾದರೂ ಕೊಡಲು ಸಮಸ್ಯೆ ಇತ್ತಾ ಎಂದರೆ ಸಾಕ್ಷಿಯು ಪಂಚನಾಮೆಯ ಸಂದರ್ಭದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಗೊಡೌನಿನಲ್ಲಿ ಅಕ್ಕಿಯನ್ನು ಇಳಿಸಬೇಕಾದರೆ ಎಷ್ಟು ಸಮಯವಾಗಿತ್ತು ಎಂದರೆ ಸಾಕ್ಷಿಯು ಬೆಳಿಗ್ಗೆ ಸುಮಾರು 11.30 ಗಂಟೆ ಆಗಿತ್ತು ಎಂದು ನುಡಿಯುತ್ತಾರೆ. ಅಕ್ಕಿಯನ್ನು ನೇರವಾಗಿ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಲು ಯಾವುದೇ ಸಮಸ್ಯೆ ಇರಲಿಲ್ಲ ಎಂದರೆ ಸರಿ. ಅಕ್ಕಿಯನ್ನು ಮಾರನೇ ದಿನ ಎಷ್ಟುಹೊತ್ತಿಗೆ ಗಾಡಿಯಲ್ಲಿ ತುಂಬಿರುತ್ತೀರಿ ಎಂದರೆ ಸಾಕ್ಷಿಯು ಅದೇ ದಿನ ತುಂಬಿರುತ್ತೇವೆ ಎಂದು ನುಡಿಯುತ್ತಾರೆ. ಅಕ್ಕಿಯನ್ನು ಇಳಿಸಿದ ನಂತರ ಏನು

ಮಾಡಿರುತ್ತೀರಿ ಎಂದರೆ ಸಾಕ್ಷಿಯು ಮಾದರಿಗಾಗಿ ಪೊಲೀಸರು ಸ್ವಲ್ಪ ಅಕ್ಕಿಯನ್ನು ತೆಗೆದುಕೊಂಡು ಹೋಗಿದ್ದು, ಉಳಿದ ಅಕ್ಕಿಯನ್ನು ಮಾರಾಟ ಮಾಡಲು ಪರವಾಣಿಗೆ ಉಪ ನಿರ್ದೇಶಕರು, ಆಹಾರ ನಿರೀಕ್ಷಕರಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಮಾದರಿ ಅಕ್ಕಿಯನ್ನು ಪೊಲೀಸರು ಎಲ್ಲಿಂದ ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿಯು ಗೊಡೌನಿನಿಂದ ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಮಾದರಿ ಅಕ್ಕಿಯನ್ನು ತೆಗೆದುಕೊಂಡ ಹೋದ ದಿನಾಂಕ ಹಾಗೂ ಸಮಯ ಹೇಳಲು ಆಗುತ್ತಾ ಎಂದರೆ ನೆನಿರುವುದಿಲ್ಲ ಎಂದು ನುಡಿಯುತ್ತಾರೆ. ಅಕ್ಕಿಯನ್ನು ಮರು ರಾಟ ಮಾಡಲು ಉಪನಿರ್ದೇಶಕರ ಬಳಿಯಿಂದ ಯಾರು ಪರವಾಣಿಗೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಗೊಡೌನ್ ವ್ಯವಸ್ಥಾಪಕರು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಗೊಡೌನಿನ ವ್ಯವಸ್ಥಾಪಕರು ಯಾರು ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಅಕ್ಕಿಯನ್ನು ಯಾರಿಗೆ ಮರುಮಾರಾಟ ಮಾಡಲಾಗಿದೆ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಪಡಿತರ ಚೀಟಿದಾರರಿಗೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನೀವು ನೇರವಾಗಿ ಗೊಡೌನಿನಿಂದ ಪಡಿತರ ಚೀಟಿದಾರರಿಗೆ ಮಾರಾಟ ಮಾಡಿರುವುದಿಲ್ಲ ಎಂದರೆ ಸರಿ. ಗೊಡೌನಿನಿಂದ ಸೊಸೈಟಿಗೆ ಕೊಡಲಾಗಿ, ಅಲ್ಲಿಂದ ಮಾರಾಟ ಮಾಡಲಾಗುತ್ತದೆ. ಯಾವ ಸೊಸೈಟಿಗೆ ಸದರಿ ಅಕ್ಕಿಯನ್ನು ಕೊಡಲಾಗಿತ್ತು ಎಂದು ಹೇಳಲು ಆಗುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

8. ಪಂಚನಾಮೆಯನ್ನು ಎಷ್ಟು ಗಂಟೆಗೆ ಮಾಡಲಾಗಿದೆ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಬೆಳಿಗ್ಗೆ 7.15 ಗಂಟೆಗೆ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಹೀಗೆ ಬರೆಯಬೇಕು ಎಂದು ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಯಾರೂ ಹೇಳಿರುವುದಿಲ್ಲ, ನಾವೇ ಹೇಳಿರುತ್ತೇವೆ. ಯಾರು ಪಂಚನಾಮೆಯನ್ನು ಬರೆದಿರುತ್ತಾರೆ ಎಂದರೆ ಸಾಕ್ಷಿಯು ಕಂದಾಯ ನಿರೀಕ್ಷಕರು, ಬಾಸ್ಗೋಡ್ ಇವರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಪಂಚನಾಮೆ ಎಷ್ಟು ಗಂಟೆಗೆ ಮುಕ್ತಾಯವಾಗಿರುತ್ತದೆ ಎಂದರೆ ಸಾಕ್ಷಿಯು ಬೆಳಿಗ್ಗೆ 9 ಗಂಟೆಗೆ ಮುಗಿದಿರುತ್ತದೆ ಎಂದು ನುಡಿಯುತ್ತಾರೆ. ಪಂಚನಾಮೆಗೆ ಸಹಿ ಮಾಡಿದವರ ಪಂಚರನ್ನು ಯಾರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯ ಕಂದಾಯ ನಿರೀಕ್ಷಕರು ಎಂದು ನುಡಿಯುತ್ತಾರೆ. ಪಂಚರ ಸಹಿಯನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಅವರನ್ನು ಸರಿಯಾಗಿ ಗುರುತಿಸಬೇಕಾಗುತ್ತದೆ ಎಂಬ ಸಾಮಾನ್ಯ ಜ್ಞಾನ ನಿಮಗೆ ಇರುತ್ತದೆ ಎಂದರೆ ಸರಿ. ಪಂಚರನ್ನು ಗುರುತಿಸಬೇಕಾದರೆ ಅವರ ವಿಳಾಸ, ವಯಸ್ಸು, ಉದ್ಯೋಗ ಬೇಕಾಗುತ್ತದೆ ಎಂದರೆ ಸರಿ. ನಿಪಿ-7 ಪಂಚನಾಮೆಯಲ್ಲಿ ಸಹಿಯನ್ನು ಪಡೆದುಕೊಂಡವರ ವಯಸ್ಸಾಗಲಿ, ವಿಳಾಸವಾಗಲಿ ಅಥವಾ ಉದ್ಯೋಗವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಒಂದೇ ರೀತಿಯ ಹೆಸರಿನವರು ಆ ಪ್ರದೇಶದಲ್ಲಿ ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ. ನಿಮ್ಮ ಪ್ರಕಾರ ನೀವು ನಿಮ್ಮ ಹೇಳಿಕೆಯನ್ನು ಎಲ್ಲಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನಿಮ್ಮ ಸಮಕ್ಷಮ ಗುರುತಿಸುವಿಕೆಯ ಕವಾಯತ್ ಆಗಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೂ ಹಾಗೂ ಆರೋಪಿತರಿಗೆ

ಯಾವುದೇ ರೀತಿಯ ಸಂಬಂಧವಿಲ್ಲದಿದ್ದರೂ ಸಹ ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ಮತ್ತು 3ನೇ ಆರೋಪಿತರ ಪರವಾಗಿ ಶ್ರೀ ಜಿ.ವಿ.ಎನ್ ಇವರಿಂದಃ

9. ದಿಃ28-05-2021 ರಂದು ಬೆಳಿಗ್ಗೆ 6 ಗಂಟೆಗೆ ಎಲ್ಲಿ ಕರ್ತವ್ಯದಲ್ಲಿ ಇದ್ದೀರಿ ಎಂದರೆ ಸಾಕ್ಷಿಯು ಅಂಕೋಲಾದ ತಹಶೀಲ್ದಾರ ಕಚೇರಿಯಲ್ಲಿ ಕರ್ತವ್ಯದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ಆ ರೀತಿ ಕರ್ತವ್ಯದಲ್ಲಿ ಇದ್ದ ಬಗ್ಗೆ ಮಾನ್ಯ ನ್ಯಾಯಾಲಯಕ್ಕೆ ದೃಢೀಕರಣ ಪತ್ರ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅದನ್ನು ಕೊಡಲು ಏನಾದರೂ ಸಮಸ್ಯೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಚಾಸಾ-1 ರವರಿಗೆ ಎಷ್ಟು ಗಂಟೆಗೆ ಮಾಹಿತಿ ಬಂದಿರತ್ತದೆ ಎಂದರೆ ಸಾಕ್ಷಿಯು ಬೆಳಿಗ್ಗೆ 6 ಗಂಟೆಗೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನೀವು ಕರ್ತವ್ಯದಲ್ಲಿ ಇದ್ದೀರಾ ಅಥವಾ ಮನೆಯಲ್ಲಿ ಇದ್ದೀರಾ ಎಂದರೆ ಸಾಕ್ಷಿಯು ಕರ್ತವ್ಯದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ನಿಮ್ಮ ಕರ್ತವ್ಯದ ಅವಧಿ ಎಷ್ಟರಿಂದ ಎಷ್ಟು ಇರುತ್ತದೆ ಎಂದರೆ ಸಾಕ್ಷಿಯು ಬೆಳಿಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಕರ್ತವ್ಯದಲ್ಲಿ ಇದ್ದ ಬಗ್ಗೆ ಹಾಜರಾತಿ ಪುಸ್ತಕ ಇರುತ್ತದೆ ಎಂದರೆ ಸರಿ. ಅದರ ಪ್ರತಿಯನ್ನು ನೀವು ತನಿಖಾಧಿಕಾರಿಗಳಿಗೆ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದ ನುಡಿಯುತ್ತಾರೆ. ಕೊಡಲು ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮಂಜುಗುಣಿ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುವಂತಹ ಸ್ಥಳ

ಎಂದರೆ ಸರಿ. ನೀವು ಆ ದಿನ ಹೋದಾಗ ಎಷ್ಟು ವಾಹನಗಳನ್ನು ಪರಿಶೀಲನೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಒಂದೇ ವಾಹನವನ್ನು ಪರಿಶೀಲನೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಅಕ್ಕಿಯು ಯಾರಿಂದ ಹಾಗೂ ಎಲ್ಲಿಂದ ಬಂದಿರುತ್ತದೆ ಎಂದು ಸ್ಥಳೀಯರಿಂದ ವಿಚಾರಣೆ ಮಾಡಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಅವರ ಹೆಸರು ಹಾಗೂ ಎಲ್ಲಿಯವರು ಎಂದು ಹೇಳಲು ಆಗುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅವರನ್ನು ಸಾಕ್ಷಿಯ ಯ್ಯಾದಿಯಲ್ಲಿ ಸೇರ್ಪಡೆ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ, ಮೌಖಿಕವಾಗಿ ಕೇಳಿರುತ್ತೇವೆ ಎಂದು ನುಡಿಯುತ್ತಾರೆ. ಬಾಸ್ಗೋಡು ಮತ್ತು ಮಂಜುಣೆಯಲ್ಲಿ ಎಷ್ಟು ಪಡಿತರ ಅಂಗಡಿಗಳು ಇರುತ್ತವೆ ಹಾಗೂ ಎಷ್ಟು ಪಡಿತರ ಅಕ್ಕಿ ಪೂರೈಕೆ ಆಗುತ್ತವೆ ಎಂದು ನಿಮಗೆ ಮಾಹಿತಿ ಇರುತ್ತದೆ ಎಂದರೆ ಸರಿ. ಘಟನೆಯಾಯಿತು ಎನ್ನುವ ಸಂದರ್ಭದಲ್ಲಿ ಎಷ್ಟು ಪಡಿತರ ಅಂಗಡಿಗಳು ಇದ್ದವು ಹಾಗೂ ಯಾವ ಅಂಗಡಿಯಿಂದ ಪಡಿತರ ಅಕ್ಕಿ ಮಾರಾಟ ಆಗಿರುತ್ತದೆ ಎಂದು ಪರಿಶೀನೆ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪರಿಶೀಲನೆ ಮಾಡಲು ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಜಿಲ್ಲಾಧಿಕಾರಿಗಳಿಗೆ ಮಾಹಿತಿಯನ್ನು ಒದಗಿಸಬೇಕಾಗುತ್ತದೆ ಎಂದರೆ ಸರಿಯಲ್ಲ. ಸರಕಾರದ ಸುತ್ತೋಲೆಯ ಪ್ರಕಾರ ಪಡಿತರ ಅಂಗಡಿಯಲ್ಲಿ ಅಕ್ಕಿ ತೆಗೆದುಕೊಂಡು ಹೋಗಿ ಕಳ್ಳದಂದೆಯಿಂದ ಮಾರಾಟ ಮಾಡುವವರ ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಗೆ ಒದಗಿಸಬೇಕಾಗುತ್ತದೆ ಎಂದು ಆದೇಶವಿರುತ್ತದೆ ಎಂದರೆ ಸರಿ. ನೀವು ಮಂಜುಗುಣೆಯಲ್ಲಿ ಯಾರು ಯಾರು ಪಡಿತರ ಅಂಗಡಿಗಳಲ್ಲಿ ಎಷ್ಟು ಪಡಿತರ

ಅಕ್ಕಿಯನ್ನು ಪಡೆದುಕೊಂಡು ಹೋಗಿರುತ್ತಾರೆ ಎಂದು ಪರಿಶೀಲನೆ ಮಾಡಿ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಒದಗಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ತಕ್ಕಡಿಯನ್ನು ಯಾರು ತಂದು ಕೊಟ್ಟಿರುತ್ತಾರೆ ಎಂದು ಹೇಳಲು ಆಗುತ್ತಾ ಎಂದರೆ ಗೊಡೌನ್ ಮುಂದೆ ತಕ್ಕಡಿ ಇತ್ತು ಎಂದು ನುಡಿಯುತ್ತಾರೆ. ಪಂಚರಿಗೆ ಪಂಚನಾಮೆಗೆ ಬರಲು ನಿಮ್ಮ ಮೇಲಾಧಿಕಾರಿಗಳು ನೋಟೀಸನ್ನು ಮಾಡಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆ ರೀತಿ ಪಂಚರಿಗೆ ನೋಟಿಸು ಜಾರಿ ಮಾಡಿ, ಪಂಚರನ್ನು ಕರೆತರಲು ನಿಮಗೆ ಯಾವುದೇ ರೀತಿಯ ತೊಂದರೆ ಇರಲಿಲ್ಲ ಎಂದರೆ ಸರಿ. ಓಡಿ ಹೋದ ಆರೋಪಿತರ ವೇಷಭೂಷಣ ಯಾವ ರೀತಿ ಇತ್ತು ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಈಗ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂಧವಿಲ್ಲದಿದ್ದರೂ ಸಹ ನೀವು ನಿಮ್ಮ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿದ್ದೀರಿ ಎಂದು ಸರಕಾರಕ್ಕೆ ತೋರಿಸಲು ಬೇನಾಮಿ ವಸ್ತುವನ್ನು ಉಪಯೋಗಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು 2ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೇಳಿಕೊಂಡಿದ್ದು, ಅದರಂತೆ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಜೆ ಎಂ ಎಫ್ ಸಿ, ಅಂಕೋಲಾ.